**(ಇಂದು ದಿಃ 15-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- 1 ಮತ್ತು 5ನೇ ಪ್ರತಿವಾದಿ ಪರ ಶ್ರೀ.JPA ವಕೀಲರಿಂದಃ-**

ನಾನು PUC ವರೆಗೆ ವಿದ್ಯಾಬ್ಯಾಸ ಮಾಡಿದ್ದೇನೆ. ನಾನು ಕಂದಾಯ ಇಲಾಖೆಯಲ್ಲಿ Land Surveyor ಆಗಿ ಕೆಲಸ ಮಾಡುತ್ತೇನೆ. ನಾನು, ನನ್ನ ಗಂಡ ಮತ್ತು ನನ್ನ ತಾಯಿ ನಡುವೆ ಸಂಬಂಧ ಚೆನ್ನಾಗಿದೆ ಎಂದರೆ ಸರಿ. ನನ್ನ ತಾಯಿ ಮತ್ತು 2ನೇ ಪ್ರತಿವಾದಿ ಸಂಬಂಧ ಕೂಡಾ ಚೆನ್ನಾಗಿದೆ ಎಂದರೆ ಸರಿ. ನನ್ನ ತಾಯಿ ಸಂಬಂಧ 1 ಮತ್ತು 5ನೇ ಪ್ರತಿವಾದಿಯರ ಜೊತೆ ಚೆನ್ನಾಗಿಲ್ಲ ಎಂದರೆ ಸರಿಯಲ್ಲ, ಎಲ್ಲರ ಸಂಬಂಧ ಚೆನ್ನಾಗಿದ್ದರೂ ದಾವೆ ಏಕೆ ಹಾಕಿದ್ದಿರಿ

ಎಂದರೆ ನನ್ನ ತಾಯಿ ಪಾಲು ಕೇಳಿದಾಗ ಅವಳ 3 ಜನ ಸಹೋದರರು ಪಾಲು ನೀಡಲು ನಿರಾಕರಿಸಿದ ಕಾರಣ ಈ ದಾವೆ ಸಲ್ಲಿಸಿದ್ದಾರೆ. ಮದುವೆ ಆದಾಗಿನಿಂದ ನನ್ನ ತಾಯಿ ದಾವಾ ಸ್ವತ್ತುಗಳಲ್ಲಿನ ಬೆಳೆ ಯಾವತ್ತು ತಂದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಪ್ರತಿವರ್ಷ ಬೆಳೆ ಬಾಬ್ತು ನನ್ನ ತಾಯಿಗೆ ಹಣ ಕೊಡುತ್ತಿದ್ದರು ಎಂದು ಹೇಳುತ್ತಾರೆ. ನನ್ನ ತಾಯಿಗೆ ಹಣ ಕೊಡುತ್ತಿದ್ದರು ಎಂದು ತೋರಿಸಲು ನಾನು ದಾಖಲಾತಿ ಹಾಜರುಪಡಿಸಿಲ್ಲ, 5ನೇ ಪ್ರತಿವಾದಿ 1ನೇ ಪ್ರತಿವಾದಿಯ ಮಗನಾಗಿದ್ದು ಆತನ ಪರವಾಗಿ ನಾಗಮಣಿ ಸರ್ವೆ ನಬಂರ 827/2 ಜಮೀನನ್ನು ದಾನಪತ್ರ ಮಡಿದ ಕಾರಣಕ್ಕೆ ಆತನನ್ನು ಪಾರ್ಟಿ ಮಾಡಿದ್ದೇನೆ. ನಾಗಮಣಿ ರವರಿಗೆ ಆಸ್ತಿ ಹೇಗೆ ಬಂತು ಎಂದರೆ ಗಂಡನ ಹೆಸರಿನಲ್ಲಿತ್ತು ಗಂಡ ತೀರಿಹೋದ ನಂತರ ಅವಳ ಹೆಸರಿಗೆ ಆಗಿದೆ ಎಂದು ಹೇಳುತ್ತಾರೆ. ಸದರಿ ಸ್ವತ್ತನ್ನು ನಾಗಮಣಿ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ, ಸದರಿ ಜಮೀನ ಮೊದಲು 6 ಎಕರೆಗಿಂತ ಹೆಚ್ಚು ಇತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು 6 ಎಕರೆ 25 ಗುಂಟೆ ಸ್ವತ್ತನ್ನು ನಾಗಮಣಿ ಹೆಸರಿಗೆ ಜಂಟಿ ಕುಟುಂಬದ ಆದಾಯದಿಂದ ಖರೀದಿ ಮಾಡಿದ್ದರು ಎಂದು ಹೇಳುತಾರೆ. ಸಾಕ್ಷಿ ಮತ್ತೆ ಮುಂದುವರೆದು ನಾಗಮಣಿಗೆ ಯಾವುದೇ ಸ್ವಂತ ಆದಾಯ ಇರಲಿಲ್ಲ ಎಂದು ಹೇಳುತ್ತಾರೆ. ಮೇಲಿನ ಸಂಗತಿಗಳನ್ನು ಸಾಬಿತು ಪಡಿಸಲು ದಾಖಲಾತಿ ಹಾಜರುಪಡಿಸಿಲ್ಲ, ನಾಗಮಣಿ ತವರು ಮನೆ ಸೇಡಂ ಎಂದರೆ ಸರಿ. ಅವರ ತವರು ಮನೆ ಕುಟುಂಬ ಆರ್ಥಿಕವಾಗಿ ಅನುಕೂಲಸ್ತ ಕುಟುಂಬದ ಎಂದರೆ ಸರಿಯಲ್ಲ, ಸದರಿ ಆಸ್ತಿಯನ್ನು ನಾಗಮಣಿ ತಂದೆ ತಾಯಿ ಮತ್ತು ಸಹೋದರರು ಹಣ ಕೊಟ್ಟು ನಾಗಮಣಿ ಹೆಸರಿಗೆ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ, ನಾಗಮಣಿ 6 ಎಕರೆ 25 ಗುಂಟೆ ಪೈಕಿ 2 ಎಕರೆಯನ್ನು ನರೇಂದ್ರರೆಡ್ಡಿ ರವರಿಗೆ ಮಾರಾಟ ಮಾಡಿದ್ದಾರೆ. ಸದರಿ ಖರೀದಿ ಪತ್ರಕ್ಕೆ 1ನೇ ಪ್ರತಿವಾದಿ ಮತ್ತು ನಾಗಮಣಿ ಗಂಡನ ಸಹಿ ಇಲ್ಲ ಎಂದರೆ ಸರಿ. ಸದರಿ ಆಸ್ತಿ 1ನೇ ಪ್ರತಿವಾದಿ ಮತ್ತು ನಾಗಮಣಿ ಗಂಡನಿಗೆ ಸಂಬಂಧ ಇಲ್ಲದೆ ಇದ್ದ ಕಾರಣಕ್ಕೆ ಖರೀದಿ ಪತ್ರಕ್ಕೆ ಅವರ ಸಹಿಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ, ಒಟ್ಟು ಕುಟುಂಬಕ್ಕೆ ಸಾಲ ಆಗಿದ್ದ ಕಾರಣ ಎಲ್ಲರು ಸೇರಿ 2 ಎಕರೆಯನ್ನು ಮಾರಾಟ ಮಾಡಿದ್ದಾರೆ. ಕೈ ಸಾಲ ಪಡೆದುಕೊಂಡಿದ್ದರು ಯಾರಿಂದ ಪಡೆದುಕೊಂಡಿದ್ದರು ನನಗೆ ಗೊತ್ತಿಲ್ಲ, ಆ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ, 2 ಮತ್ತು 3ನೇ ಪ್ರತಿವಾದಿ ಅವರ

ಸ್ವಂತಕ್ಕಾಗಿ ಸಾಲ ಮಾಡಿಕೊಂಡಿದ್ದರು ಸದರಿ ಸಾಲ ಪಾವತಿ ಮಾಡಲು ನಾಗಮಣಿ 2 ಎಕರೆ ಜಮೀನು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಕಾರಣಕ್ಕೆ ಖರೀದಿ ಪತ್ರಕ್ಕೆ 2 ಮತ್ತು 3 ನೇ ಪ್ರತಿವಾದಿ ಸಹಿ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು 1ನೇ ಪ್ರತಿವಾದಿ ಕೂಡ ಸಹಿ ಮಾಡಿದ್ದಾರೆ ಎಂದು ಹೇಳುತ್ತಾರೆ. ನಾಗಮಣಿ ರವರಿಗೆ ಯಾವುದೇ ಸಾಲ ಇರಲಿಲ್ಲ 2 ಮತ್ತು 3ನೇ ಪ್ರತಿವಾದಿ ಮಾಡಿದ್ದ ಸಾಲಕ್ಕೆ ಜಮೀನು ಮಾರಾಟ ಮಾಡಿರುವ ಕಾರಣಕ್ಕೆ ಸದರಿ 2 ಎಕರೆ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

ಸೇಡಂ ಬಿಡಪ್ಪ ಕುಟುಂಬ ಪ್ರತಿಷ್ಠಿತ ಕುಟುಂಬ ಎಂದರೆ ಸರಿ. ಸದರಿ ಕುಟುಂಬಕ್ಕೆ ಯಾವತ್ತು ಯಾವುದೇ ಸಾಲ ಇರಲಿಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಹೆಸರಿಗೆ ಖರೀದಿಸಿದ ಸರ್ವೆ ನಂಬರ 827/1 ರಲ್ಲಿ 3 ಎಕರೆ 20 ಗುಂಟೆ ಜಮೀನನ್ನು 2ನೇ ಪ್ರತಿವಾದಿ ನರೇಂದ್ರ ರೆಡ್ಡಿ ರವಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಖರೀದಿ ಪತ್ರಕ್ಕೆ ನನ್ನ ತಾಯಿ ಸಹಿ ಇಲ್ಲ ಎಂದರೆ ಸರಿ. ಅದೇ ರೀತಿ ನಾಗಮಣಿ ಮಾರಾಟ ಮಾಡಿದ ಖರೀದಿ ಪತ್ರಕ್ಕೆ ಕೂಡ ನನ್ನ ತಾಯಿ ಸಹಿ ಇಲ್ಲ ಎಂದರೆ ಸರಿ. ಸದರಿ ಖರೀದಿ ಪತ್ರಗಳ ಬಗ್ಗೆ ನನ್ನ ತಾಯಿಗೆ ಮಾಹಿತಿ ಇಲ್ಲ. ಸದರಿ ಮಾರಾಟಗಳು ಆದ ನಂತರ ಬಂದ ಮಾರಾಟದ ಹಣದಲ್ಲಿ ನನ್ನ ತಾಯಿಗೆ ಭಾಗ ಕೊಟಿಲ್ಲ. ನಾಗಮಣಿ ಮತ್ತು 2ನೇ ಪ್ರತಿವಾದಿ ಮಾರಾಟ ಮಾಡಿದ ಸ್ವತ್ತುಗಳನ್ನು ಈ ದಾವೆಯಲ್ಲಿ ಏಕೆ ಸೇರಿಸಿಲ್ಲ ಎಂದರೆ ಈಗಾಗಲೆ ಮಾರಾಟ ಮಾಡಿ ಆಗಿದೆ ಕಾರಣ ಸೇರಿಸಿಲ್ಲ ಎಂದು ಹೇಳುತ್ತಾರೆ. ಆ 2 ಆಸ್ತಿಗಳನ್ನು ಮತ್ತು ಖರೀದಿದಾರರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಕಾರಣ ದಾವೆ ಉರ್ಜಿತ ಅಲ್ಲ ಎಂದರೆ ಸರಿಯಲ್ಲ.

1ನೇ ಪ್ರತಿವಾದಿ ಮದುವೆ ಆದ ನಂತರ ಹೆಣ್ಣು ಮಕ್ಕಳ ನಡುವೆ ಹೊಂದಾಣಿಕೆ ಆಗದ ಕಾರಣ 1ನೇ ಪ್ರತಿವಾದಿ ಮತ್ತು ಹೆಂಡತಿ ಮಕ್ಕಳು ಬೇರೆ ವಾಸ ಇದ್ದಾರೆ ಎಂದರೆ ಸರಿಯಲ್ಲ. ನನ್ನ ಮದುವೆ ಆದ ನಂತರ ಕೂಡ ನಾವು ಬೇರೆ ಬೇರೆ ವಾಸ ಇದ್ದೆವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 2 ಮತ್ತು 3ನೇ ಪ್ರತಿವಾದಿ ಒಟ್ಟಿಗೆ ವಾಸ ಇದ್ದರು ಎಂದು ಹೇಳುತ್ತಾರೆ. ನನ್ನ ಮದುವೆ ಆಗಿ 15 ವರ್ಷ ಆಗಿದೆ. ಸಾಕ್ಷಿಗೆ ಒಂದು ಪೋಟೋ ತೊರೀಸಲಾಗಿ ನನ್ನ ಮದುವೆ ಆದ ಸ್ವಲ್ಪ ದಿನಗಳ ನಂತರ ಸದರಿ ಪೋಟದಲ್ಲಿ ಕಾಣುತ್ತಿರುವ ಮನೆಯಲ್ಲಿ ವಾಸ ಇರುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಇನ್ನೊದು ಪೋಟೋ ತೋರಿಸಿ ಅದು 1ನೇಪ್ರತಿವಾದಿ

ವಾಸ ಇರುವ ಮನೆ ಎಂದು ಹೇಳಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊದು ಪೋಟೋ ತೋರಿಸಿ ಅದು 2ನೇ ಪ್ರತಿವಾದಿ ವಾಸ ಇರುವ ಮನೆ ಎಂದು ಹೇಳಿದ್ದು ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊದು ಪೋಟೋ ತೋರಿಸಲಾಗಿ ಅದರಲ್ಲಿರುವ ಮನೆ ನನ್ನ ಗಂಡನ ಭಾಗಕ್ಕೆ ಬಂದಿದೆ ಎಂದರೆ ಸರಿ. ಸದರಿ ಪೊಟೋವನ್ನು ನಿಡಿ-3 ಎಂದು ಗುರುತಿಸಲಾಯಿತು. ಸದರಿ ಮನೆಯನ್ನು ನಾವು ಕೀಲಿ ಹಾಕಿ ಕಲಬುರಗಿಯಲ್ಲಿ ವಾಸ ಇದ್ದೆವೆ ಎಂದರೆ ಸರಿ. ಮೇಲೆ ಹೇಳಿದಂತೆ ಪ್ರತ್ಯೇಕವಾಗಿ ಕಳೆದ 12 ವರ್ಷಗಳಿಂದ ವಾಸ ಇದ್ದೆವೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಕಳೆದ 6 ವರ್ಷಗಳಿಂದ ವಾಸ ಇದ್ದೆವೆ ಎಂದು ಹೇಳುತ್ತಾರೆ.

1 ರಿಂದ 3ನೇ ಪ್ರತಿವಾದಿಯರು ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸರಿ. ಸದರಿ ವಿಭಾಗ ಪತ್ರಕ್ಕೆ ಬೇಕಾಗಿರುವ ಮ್ಯಾಪ ಮಾಡಿಸಲು ನಾನೇ ಸಹಾಯ ಮಾಡಿದ್ದೇನೆ ಎಂದರೆ ಸರಿಯಲ್ಲ, ಸದರಿ ವಿಭಾಗ ಪತ್ರ ಆದ ಬಗ್ಗೆ ನನಗೆ ಮಾಹಿತಿ ಇರಲಿಲ್ಲ, ನಾನು ಕಚೇರಿಗೆ ಕೆಲಸಕ್ಕೆ ಹೋಗುತ್ತೇನೆ ಕಾರಣ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ರಾತ್ರಿ ಗಂಡ ಹೆಂಡತಿ ಜೊತೆ ಇರುತ್ತೇವೆ ಎಂದರೆ ಸರಿ. ನನ್ನ ಗಂಡ ವಿಭಾಗ ಪತ್ರ ಮಾಡಿಕೊಂಡಿರುವ ಬಗ್ಗೆ ನನಗೆ ಹೇಳಿಲ್ಲ, ಸದರಿ ವಿಭಾಗ ಪತ್ರದ ಬಗ್ಗೆ ನನಗೆ 2023 ರಲ್ಲಿ ಗೊತ್ತಾಗಿದೆ. ನಾನು 4ನೇ ಪ್ರತಿವಾದಿ ಮಾತನಾಡುತ್ತೇವೆ. 4ನೇ ಪ್ರತಿವಾದಿ 1 ರಿಂದ 3ನೇಪ್ರತಿವಾದಿಯರು ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದು ನನಗೆ ಹೇಳಿಲ್ಲ, 2ನೇ ಪ್ರತಿವಾದಿ ಸರ್ವೆ ನಬಂರ 733/3 ರಲ್ಲಿನ 3 ಎಕರೆ 2 ಗುಂಟೆ ಸ್ವತ್ತನ್ನು 4ನೇ ಪ್ರತಿವಾದಿಗೆ ದಾನ ಪತ್ರ ಮಾಡಿರುವ ಕಾರಣ ಅವಳನ್ನು ಪಾರ್ಟಿ ಮಾಡಿದ್ದೇವೆ. 1 ರಿಂದ 3ನೇ ಪ್ರತಿವಾದಿಯರ ವಿಭಾಗ ಮಾಡಿಕೊಂಡ ಬಗ್ಗೆ ನನ್ನ ತಾಯಿಗೆ ಗೊತ್ತಿತ್ತು ಎಂದರೆ ಸರಿಯಲ್ಲ,

ವಿಭಾಗ ಪತ್ರದ ಪ್ರಕಾರ ಅವರವರ ಭಾಗದ ಸ್ವತ್ತುಗಳಲ್ಲಿ ಅವರವರು ಕಬ್ಜಾದಲ್ಲಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆರೀತಿ ಪ್ರತ್ಯೇಕವಾಗಿ ಕಬ್ಜಾದಲ್ಲಿದ್ದಾರೆ ಎಂದು ಇತ್ತಿಚೆಗೆ ಗೊತ್ತಾಗಿದೆ ಎಂದು ಹೇಳುತ್ತಾರೆ. 1 ರಿಂದ 3ನೇ ಪ್ರತಿವಾದಿಯರು ಮೊದಲೆ ಆಸ್ತಿಗಳನ್ನು ಹಂಚಿಕೊಂಡಿದ್ದರು ಮುಟೇಷನ ಮಾಡಿಕೊಳ್ಳಬೇಕು ಎಂಬ ಕಾರಣಕ್ಕೆ ನೋಂದಾಯಿತ ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ, 2000 ರಲ್ಲಿ ವಿಭಾಗ

ಪತ್ರ ಆದ ದಿನದಿಂದ ವಿಭಾಗ ಪತ್ರದ ಬಗ್ಗೆ ನನಗೆ ಮತ್ತು ನನ್ನ ತಾಯಿಗೆ ಗೊತ್ತು ಎಂದರೆ ಸರಿಯಲ್ಲ.

ನಾಗಮಣಿ ಮತ್ತು 2ನೇ ಪ್ರತಿವಾದಿ ಹೆಸರಲ್ಲಿ ಖರೀದಿ ಮಾಡಿರುವ ಆಸ್ತಿಗಳನ್ನು ಹೊರುತ ಪಡಿಸಿ ಉಳಿದೆಲ್ಲ ದಾವಾ ಸ್ವತ್ತುಗಳು ಮುಂಚೆ ರಾಚಪ್ಪನಿಗೆ ಸೇರಿದ್ದವು ಎಂದರೆ ಸರಿಯಲ್ಲ. ರಾಚಪ್ಪನಿಗೆ ಸಿದ್ದಪ್ಪ ಒಬ್ಬನೇ ಮಗ ಎಂದರೆ ಸರಿ. ಸಿದ್ದಪ್ಪನಿಗೆ ನೀಲಮ್ಮ ಮತ್ತು ಚಂದ್ರಮ್ಮ ಎಂಬ ಇಬ್ಬರು ಹೆಂಡತಿಯರು ಎಂದರೆ ಕೇಳಿದ್ದೇನೆ ಆದರೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಮೊದಲನೇ ಹೆಂಡತಿ ನೀಲಮ್ಮಳಿಗೆ 5 ಜನ ಮಕ್ಕಳು ಎಂದರೆ ಸರಿ. ಅವುರುಗಳೆಂದರೆ ಶಿವಶರಣಪ್ಪ, ರಾಜಪ್ಪ, ಈರಪ್ಪ, ಮಹಾದೇವಪ್ಪ ಮತ್ತು ಮಹಾದೇವಿ ಎಂದರೆ ಸರಿ. 2ನೇ ಹೆಂಡತಿ ಚಂದ್ರಮ್ಮಳಿಗೆ 3 ಜನ ಮಕ್ಕಳು ಅವುರುಗಳೆಂದರೆ ಶಂಕರಮ್ಮ ಗುಂಡಪ್ಪ ಮತು ಶಿವಶಂಕರ ಎಂದರೆ ಸರಿ. ಸಿದ್ದಪ್ಪನ ಇಬ್ಬರು ಹೆಂಡತಿಯರ ಮಕ್ಕಳ ನಡುವೆ ಸಿದ್ದಪ್ಪನ ಆಸ್ತಿಗೆ ಸಂಬಂಧ ಪಟ್ಟಂತೆ ನೋಂದಾಯಿತ ವಿಭಾಗ ಪತ್ರ ಅಥವಾ ಕೊರ್ಟ ಡಿಕ್ರಿ ಪ್ರಕಾರ ವಿಭಾಗ ಆಗಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಮುಟೇಷನ ಪ್ರಕಾರ ವಿಭಾಗ ಆಗಿದ ಎಂದು ಹೇಳುತ್ತಾರೆ. ಅವರು ಭಾಗ ಆದ ಬಗ್ಗೆ ಮುಟೇಷನರಿಜಿಸ್ಟರ ಅನ್ನು ಹಾಜರುಪಡಿಸಿದ್ದೇನೆ. ಸಿದ್ದಪ್ಪನ ಉಳಿದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ನನ್ನ ತಾತನ ಭಾಗಕ್ಕೆ ಬಂದಿದ್ದ ಆಸ್ತಿಗಳಲ್ಲಿ ಮಾತ್ರ ಭಾಗ ಕೇಳುತ್ತಿದ್ದೇವೆ ಕಾರಣ ಸಿದ್ದಪ್ಪನ ಉಳಿದ ಆಸ್ತಿಗಳನ್ನು ದಾವೆಯಲ್ಲಿ ಸೇರಿಸುವ ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ. ಸಿದ್ದಪ್ಪನ ಎಲ್ಲಾ ವಾರಸುದಾರರನ್ನು ಈ ದಾವೆ ಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ. ಸಿದ್ದಪ್ಪನ ಆಸ್ತಿಗಳಲ್ಲಿ ಆತನ ಹೆಣ್ಣು ಮಕ್ಕಳಾದ ಶಂಕ್ರಮ್ಮ ಮತು ಮಹಾದೇವಿಗೆ ಭಾಗ ಕೊಟ್ಟಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರ ಮದುವೆ ಕಾಲಕ್ಕೆ ಕೊಡಬೇಕಾದ ಎಲ್ಲವನ್ನು ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಮದುವೆ ಕಾಲಕ್ಕೆ ಏನುಕೊಟ್ಟಿದ್ದಾರೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ.

ನನ್ನ ತಾಯಿ ನೀಲಮ್ಮಳನ್ನು ಒಳ್ಳೆ ಮನೆತನಕ್ಕೆ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿ. ಮುಂಚೆ ಹೆಣ್ಣು ಮಕ್ಕಳ ಮದುವೆ ಆಗುವುದು ಕಷ್ಟ ಇತ್ತು ಎಂದರೆ ಸರಿಯಲ್ಲ. ಕಾರಣ ಈರಪ್ಪ, ನಾಗಮಣಿ 1 ಮತ್ತು 2ನೇ ಪ್ರತಿವಾದಿಯರು ಸೇರಿ ವಾದಿಗೆ ಸಾಕಷ್ಟು ಹಣ ಬಂಗಾರ

ಕೊಟ್ಟು ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ, ಕಾರಣ ಮದುವೆ ಆಗಿ 35 ವರ್ಷದ ವರೆಗೆ ನನ್ನ ತಾಯಿ ದಾವಾ ಸ್ವತ್ತುಗಳಿಗೆ ಆಸೆ ಮಾಡಿರಲಿಲ್ಲ ಎಂದರೆ ಸರಿಯಲ್ಲ, ನಾನು ನನ್ನ ಗಂಡ ಮತ್ತು 2ನೇ ಪ್ರತಿವಾದಿ ಶರಿಕ ಆಗಿ ನನ್ನ ತಾಯಿಗೆ ಪುಸಲಾಯಿಸಿ ಈ ದಾವೆ ಹಾಕಿಸಿದ್ದೇವೆ ಎಂದರೆ ಸರಿಯಲ್ಲ, ನಾಗಮಣಿ 5ನೇ ಪ್ರತಿವಾದಿಗೆ ದಾನ ಪತ್ರ ಬರೆದುಕೊಟ್ಟಿರುವ ಕಾರಣಕ್ಕೆ ಈ ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ, ನಾಗಮಣಿಗೆ ಪಾರ್ಶ್ವ ವಾಯ ಆಗಿತ್ತು ಎಂದರೆ  ಸರಿ. ಕಾರಣ ಅವಳು ಮಲಗಿಕೊಂಡು ಸ್ವಾಭಾವಿಕ ಕ್ರಿಯೇಗಳನ್ನು ಮಾಡುತ್ತಿದ್ದಳು ಎಂದರೆ ಸರಿ. ಆಗ ಅವಳನ್ನು ಅವಳ 3 ಜನ ಮಕ್ಕಳು ಮತು ಇಬ್ಬರು ಸೊಸೆಯಂದಿರು ಅವಳನ್ನು ನೋಡಿಕೊಂಡಿಲ್ಲ ಎಂದರೆ ಸರಿಯಲ್ಲ, ಆಗ 5ನೇಪ್ರತಿವಾದಿ ಮತ್ತು ಅವರ ತಾಯಿ ನಾಗಮಣಿಯನ್ನು ಚೆನ್ನಾಗಿ ನೋಡಿಕೊಂಡಿದ್ದರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು  ವ್ಯವಸ್ತೆ ಮಾಡಲು ಎಲ್ಲರು ಸೇರಿ ಒಂದು ಆಳು ಇಟ್ಟಿದ್ದೆವು ಎಂದು ಹೇಳುತ್ತಾರೆ. 5ನೇ ಪ್ರತಿವಾದಿ ನಾಗಮಣಿಗ ಸೇವೆ ಮಾಡಿದ ಕಾರಣ ನಾಗಮಣಿ ಆಸ್ತಿಯನ್ನು ದಾನ ಮಾಡಿದ್ದಾರೆ ಎಂದರೆ ಸರಿಯಲ್ಲ,

ನಾಗಮಣಿಯ ಶವಸಂಸ್ಕಾರದ ಖರ್ಚು ವೆಚ್ಚವನ್ನು 5ನೇ ಪ್ರತಿವಾದಿ ಮಾಡಿದ್ದಾರೆ ಎಂದರೆ ಸರಿಯಲ್ಲ, ನಾಗಮಣಿ ತೀರಿಹೋದಾಗ ಅವರ ಕೊರಳಲ್ಲಿನ ಲಿಂಗವನ್ನು ತೆಗೆದು 5ನೇಪ್ರತಿವಾದಿಗೆ ಹಾಕಿದ್ದಾರೆ ಎಂದರೆ ಸರಿಯಲ್ಲ, ದಾನ ಪತ್ರದ ಪ್ರಕಾರ ಬಂದಿರುವ ಜಮಿನಿಗೆ 5ನೇ ಪ್ರತಿವಾದಿ ಮಾಲಿಕರಾಗಿ ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ, ದಾನಪತ್ರ ಆದ ನಂತರ ನಾಗಮಣಿ 1 ತಿಂಗಳು ಬದುಕಿದ್ದರು. ಮುಟೇಷನ ಆಗುವಾಗ ನಾನು ನನ್ನ ಗಂಡ ಮತ್ತು 2ನೇಪ್ರತಿವಾದಿ ತಕರಾರು ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು  ಯಾರಿಗೂ ಗೊತ್ತಾಗದ ಹಾಗೆ ದಾನಪತ್ರ ಮತ್ತು ಮುಟೇಷನ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ನನ್ನ ತಾಯಿಗೆ ಈ ದಾವೆ ಸಲ್ಲಿಸಲು 2ನೇ ಪ್ರತಿವಾದಿ ಸಹಾಯ ಮಾಡಿದ್ದಾರೆ ಎಂದರೆ ಸರಿಯಲ್ಲ, ನಿಪಿ-2 ರಿಂದ 7, 60, 61,  67 ಮತ್ತು 101 ಅನ್ನು 2 ನೇ ಪ್ರತಿವಾದಿ ವಾದಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ, ನನ್ನ ತಾಯಿಗೆ ನಾವು 5 ಜನ ಮಕ್ಕಳು ಎಂದರೆ ಸರಿ. ಎಲ್ಲರು ವಯಸ್ಕರು ಎಂದರೆ ಸರಿ. 3 ಜನ ಹೆಣ್ಣು ಮಕ್ಕಳು 2 ಗಂಡು ಮಕ್ಕಳು ಎಂದರೆ ಸರಿ. ನನ್ನ ತಾಯಿಗೆ ಈಗ 51 ವರ್ಷ ವಯಸ್ಸು ಎಂದರೆ ಸರಿ. ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ

ಹೇಳಿದರೆ ಸತ್ಯ ಗೊತ್ತಾಗುತದೆ ಎಂಬ ಕಾರಣಕ್ಕೆ ನಾನು SPA ಪಡೆದುಕೊಂಡು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಮದುವೆ ಕಾಲಕ್ಕೆ ನನ್ನ ತಾಯಿಗೆ ಬಂಗಾರ ಹಣ ಕೊಟ್ಟಿರುವ ಕಾರಣ ಈ ದಾವೆ ಸಲ್ಲಿಸಲು ಅವಳಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ, ಈಗಾಗಲೆ ಭಾಗ ಆಗಿರುವ ಕಾರಣ ಮತ್ತೆ ವಿಭಾಗ ಮಾಡುವ ಪ್ರಶ್ನೇ ಇಲ್ಲ ಎಂದರೆ ಸರಿಯಲ್ಲ, ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳ್ಳು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**